**ದಿನಾಂಕಃ 16-06-2025 ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ. ಡಿ ಕೆ ವಕೀಲರಿಂದಃ**

ನನ್ನ ಮಗನು ಕೊಬ್ಬರಿ ಹಾಗೂ ದ್ವಿ ಚಕ್ರವಾಹನದ ಮಾರಾಟವನ್ನು ಮಾಡುತ್ತಿದ್ದ ಬಗ್ಗೆ ನಾನು ಸರ್ಕಾರದಿಂದ ಯಾವುದೇ ಟಿನ್ ನಂಬರನ್ನು ಪಡೆದುಕೊಂಡಿರಲಿಲ್ಲ. ದಾವಾ ಆಸ್ತಿಯು ವಾಣಿಜ್ಯ ಮಳಿಗೆ ಅಂದರೆ ಸರಿ . ದಾವಾ ಆಸ್ತಿಯು ದಾವೆಯನ್ನು ಹೂಡಿದಂತಹ ಸಮಯದಲ್ಲಿ ಸುಮಾರು 20 ಲಕ್ಷದಷ್ಟು ಮಾರುಕಟ್ಟೆ ಬೆಲೆಯಷ್ಟು ಮೊತ್ತ ಇತ್ತು ಎಂದರೆ ಸರಿ . ದಾವಾ ಆಸ್ತಿಯ ಮೌಲ್ಯವು ಈಗ ರೂ.40 ಲಕ್ಷ ಇದೆ ಎಂದರೆ ಸಾಕ್ಷಿಯು 25 ಲಕ್ಷ ಇರಬಹುದು ಎಂದು ನುಡಿಯುತ್ತಾರೆ. ದಾವಾಸ್ವತ್ತಿನ ಪಕ್ಕದಲ್ಲಿ ಇರತಕ್ಕಂತಹ ಆಸ್ತಿ ಯನ್ನು ನಾನು ಖರೀದಿ ಮಾಡಿದ್ದು ಅದನ್ನು ನಾನು ಮಾರಾಟ ಮಾಡಿದ ಸಮಯದಲ್ಲಿ ಸುಮಾರು ರೂ, 25 ಲಕ್ಷ ಬೆಲೆ ಇರುತ್ತದೆ. ಸದರಿ ಆಸ್ತಿಗೆ ಸಂಬಂದಪಟ್ಟ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ಆಸಿಯನ್ನು ನಾನು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿದ್ದೆ ಎಂದರೆ ಸರಿ . ಅದನ್ನು ಯಾವ ಇಸವಿಯಲ್ಲಿ ಖರೀದಿ ಮಾಡಿದ್ದೆ ಎಂದು ನೆನಪಿಲ್ಲ. ನನ್ನ ಸ್ವಂತ ಆದಾಯದಿಂದ ಖರೀದಿ ಮಾಡಿರ ತಕ್ಕಂತಹ ಆಸ್ತಿಗಳನ್ನು ಸುಮಾರು 10 ವರ್ಷಗಳ ಹಿಂದೆ ನನ್ನ ಮಗಳ ಹೆಸರಿಗೆ ಬರೆದಿರುತ್ತೇನೆ ಅದಕ್ಕೆ ಸಂಬಂದಪಟ್ಟ ಎಲ್ಲಾ ದಾಖಲಾತಿಗಳನ್ನು ನಾನು ಹಾಜರುಪಡಿಸಿದ್ದೇನೆ. ಸದರಿ ಆಸ್ತಿಯನ್ನು ನಾವು ಒಟ್ಟು ಕುಟುಂಬದಲ್ಲಿದಂತಹ ಸಮಯದಲ್ಲಿ ಖರೀದಿ ಮಾಡಿದಂತಹ ಆಸ್ತಿ ಎಂದರೆ ಸರಿ . ನಾನು ಈ ದಾವೆಯಲ್ಲಿ ಈ ಎಲ್ಲಾ ಸ್ವತ್ತುಗಳನ್ನು ಹಾಗೂ ವಿವರಗಳು ನನಗೆ ಸಂಬಂದಪಟ್ಟಿದ್ದು ಎಂದು ಎಲ್ಲಿಯೂ ನಮೂದಿಸಿಲ್ಲ ಎಂದರೆ ಸರಿ. ಈ ದಾವಾ ಅಸ್ತಿ ನನಗೆ ಮರಣ ಶಾಸನ ಪತ್ರದ ಮುಖಾಂತರ ಬಂದಿದ್ದು ಅದು ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ ಎಂದರೆ ಸರಿ . ದಾವಾ ಆಸ್ತಿಯು ನೆಲಮಹಡಿ ಮತ್ತು ಮೊದಲನೆ ಮಹಡಿ ಎರಡೂ ಸಹ ಇದೆ ಎಂದರೆ ಸರಿ . ಈ ದಾವಾ ಆಸ್ತಿಯನ್ನು ನನ್ನ ಮಗನಿಗೆ ಹಕ್ಕು ಬಿಡುಗಡೆ ಪತ್ರದ ಮುಖಾಂತರ ಅವನ ಭಾಗವಾಗಿ ನೀಡಿರುತ್ತೇನೆ ಎಂದರೆ ಸರಿ . ಸಾಕ್ಷಿ ಮುಂದುವರೆದು ನನ್ನ ಮಗನು ವ್ಯಾಪಾರವನ್ನು ಆರಂಭ ಮಾಡುವ ಕಾರಣದಿಂದ ಅವನಿಗೆ ಸಹಾಯವಾಗಲೀ ಎಂದು ನೀಡಿರುತ್ತೇನೆ .

**ಈ ಹಂತದಲ್ಲಿ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಧಿಕ ಸಿವಿಲ್ ನ್ಯಾಯಾಧೀಶರು,
ತಿಪಟೂರು.